"ಪತ್ತೇದಾರರು ಆಗ್ಲೇ ತನಿಖೆ ಶುರು ಮಾಡ್ದ ಹಾಗಿದೆ? ಮೋಹಿತನ ಬಗ್ಗೆ ಏನಾದ್ರೂ ಗೊತ್ತಾಯ್ತಾ?"

ತೇಲಿ ಬಂದ ಜೇನಿನಂತಹ ಮಾತಿನಲ್ಲಿ ವ್ಯಂಗ್ಯವಿತ್ತು. ನಾವು ಅತ್ತ ದೃಷ್ಟಿ ಹೊರಳಿಸಿದೆವು. ಬಾಗಿಲ ಸನಿಹದಲ್ಲಿ ಮಾದಕ ರೂಪು!

"ಮೇಡಂಗೆ ನಾವು ಬಂದ ಉದ್ದೇಶದ ಅರಿವು ಈಗಾಗಲೇ ಇರುವಂತಿದೆ!"

"ಆ ಮುದುಕನ ಮಾತನ್ನು ಕೇಳಿ, ನೀವು ನಿಮ್ಮ ಸಮಯವನ್ನು ಇಲ್ಲಿ ವ್ಯರ್ಥವಾಗಿ ಕಳೆಯುತ್ತಿದ್ದೀರಲ್ಲ ಅಂತ ನನಗೆ ಬೇಸರವಾಗ್ತಿದೆ. ಹೇಳ್ದೆ, ಕೇಳ್ದೆ ನಾಪತ್ತೆಯಾಗೋದು, ಮತ್ತೆ ಪ್ರತ್ಯಕ್ಷ ಆಗೋದು ನನ್ನ ಗಂಡನಿಗೆ ಮಾಮೂಲು."

ನಾಳಿಯಂಡ ಸೋಮಯ್ಯನ ಬಗ್ಗೆ ಆಕೆಗೆ ಇರುವ ಕಹಿ ಮಾತಿನಲ್ಲಿ ಅಭಿವ್ಯಕ್ತಿಗೊಂಡಿತ್ತು.

"ಅವ್ನು ನಿಮ್ಮ ಗಂಡನ ಒಳಿತು ಬಯಸಿ ಹೇಳಿದ್ದಾರೆ"

"ಅವ್ನೊಬ್ಬ ಅಧಿಕ ಪ್ರಸಂಗಿ ಕಾಮುಕ! ಒಮ್ಮೆ ನನ್ ಜೊತೆ ಅಸಭ್ಯವಾಗಿ ವರ್ತಿಸ್ದ. ಚೆನ್ನಾಗಿ ದಬಾಯಿಸ್ದೆ. ಆಮೇಲಿಂದ ಅವ್ನ ನೆರಳು ನೋಡಿದ್ರೂ ನನಿಗೆ ಆಗೋಲ್ಲ. ಆದ್ರೆ ಮೋಹಿತಗೆ ಅದೆಲ್ಲಾ ಗೊತ್ತಾಗೊಲ್ಲ. ಸೋಮಯ್ಯ ಸಾಚಾ ಅಂದ್ಕೊಂಡಿದ್ದಾನೆ, ಪಾಪ"

"ಉದ್ದಪಂಡ ಚೆಂಗಪ್ಪನಿಗೂ, ನಿಮ್ಗೂ ಏನು ಸಂಬಂಧ?"

ಇರಿಯುವಂತೆ ಬಂದ ಪ್ರಶ್ನೆಗೆ ಆಕೆ ಮುಖ ಕಿವಿಚಿದಳು,

"ನಿಮ್ಗೆ ಆ ಸೋಮಯ್ಯ ಇಲ್ಲಸಲ್ಲದ ಕತೆ ಹೇಳಿರ್ಬೇಕು! ಚೆಂಗಪ್ಪ ನನ್ನ ಹಿತೈಷಿ, ನನ್ನ ಕುಟುಂಬದ ಮಿತ್ರ ಅಷ್ಟೆ. ಅದಕ್ಕೂ ಹೆಚ್ಚಿನ ಸಂಬಂಧವೇನೂ ನಮಗಿಲ್ಲ."

"ಮೋಹಿತ್ ಯಾಕೆ ಹಾಗೆ ಆಗಾಗ್ಗೆ ನಾಪತ್ತೆ ಆಗ್ತಾ ಇದ್ರು ಅಂತ ನಿಮ್ಗೇನಾದ್ರೂ ಗೊತ್ತಾ?"

"ಅವರ ಈ ವಿಚಿತ್ರ ವರ್ತನೆ ಸುಮಾರು ಒಂದು ವರ್ಷದಿಂದ ಶುರುವಾಯ್ತು. ಯಾವಾಗ ನೋಡಿದ್ರೂ ತಮ್ಮ ರೂಮಲ್ಲೇ ಬಾಗಿಲು ಹಾಕಿ ಇರ್ತಾರೆ. ಯಾವ್ದೋ ಭಯದಲ್ಲಿ ಇದ್ದಂಗೆ! ಕೆಲವೊಮ್ಮೆ ಆ ಎದುರಿನ ಕಾಡಿಗೆ ಹೋದ್ರೆ ಕೆಲವು ದಿನ ಬರೋಲ್ಲ. ಅವ್ರಿಗೆ ಟ್ರೆಕಿಂಗ್ ಅಂದ್ರೆ ತುಂಬಾ ಆಸಕ್ತಿ."

"ಒಂದು ವರ್ಷದಿಂದ ಅಂತೀರಿ! ಏನಾದ್ರೂ ವಿಶೇಷ ಘಟನೆಗಳು ಆ ಸಮಯಕ್ಕೆ ನಡೆದ ನೆನಪಿದೆಯೆ?"

"ಅಂತಹದು ಏನೂ ಇಲ್ಲ. ಅದಿಕ್ಕೂ ಮೊದಲು ಅವರು ಗುಜರಾತಿನ ಸೂರತ್‌ನಲ್ಲಿ ಹೋಟೆಲಲ್ಲಿ ಕೆಲ್ಸ ಮಾಡ್ತಾ ಇದ್ರು. ಸುಮಾರು ಮೂರು ವರ್ಷ ಅಲ್ಲಿದ್ದು, ಈ ವರ್ಷ ಜನವರಿ ಎಂಟಕ್ಕೆ ವಾಪಸ್ ಆದ್ರು. ಆಮೇಲೆ ಈ ರೀತಿ ಶುರುವಾಯ್ತು."

"ನಿಮ್ಗೆ ಏನು ಅನ್ಸುತ್ತೆ? ಪಾರ್ಟಿ ಮಾಡಲು ಹೊರಟ ಮೋಹಿತ್ ಏಕಾಏಕಿ ಟ್ರೆಕಿಂಗಿಗೆ ಕಾಡಿಗೆ ಹೋದ್ರು ಅಂದ್ರೆ ನಂಬಲರ್ಹವೆ?"

"ನನ್ಗೂ ನಂಬೋಕೆ ಆಗೋಲ್ಲ. ಹೋಗುವಾಗ ಅವರ ಮೊಗದಲ್ಲಿ ಭಯ ಇತ್ತು. ಅದ್ಯಾಕೆ ಅಂತ ಗೊತ್ತಾಗ್ತಿಲ್ಲ. ಆದ್ರೂ ಮೋಹಿತ್ ಕೆಲವೊಮ್ಮೆ ಹೀಗೆ ತಲೆ ಇಲ್ಲದ ಹಾಗೆ ವರ್ತನೆ ಮಾಡೋದು ಮಾಮೂಲು."

"ನಿಮ್ಮ ಮದುವೆಯಾಗಿ ಎಷ್ಟು ವರ್ಷಗಳಾಯ್ತು?"

ಐದು ವರ್ಷ ಎಂದಾಕೆ ಉತ್ತರಿಸಿದಳು.

ಅಷ್ಟರಲ್ಲಿ ಹೊರಗಡೆ ಸಪ್ಪಳವಾಯಿತು. ಪರಿಚಿತ ದನಿ ಕೇಳಿ ಬಂತು. ಸ್ವಲ್ಪ ತಡ ಆಯ್ತು